
# ಕರ್ನಾಟಕದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಇನ್ನೂ ಇದೆಯೇ?

Alternative Law Forum
*lawyering for change*

ಕರ್ನಾಟಕದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ಪ್ರಕರಣಗಳು (1995–2023) **106**



ಕರ್ನಾಟಕದಲ್ಲಿ ಮ್ಯಾನುಯಲ್ ಸ್ಕ್ಯಾವೆಂ-ಜಿಂಗ್ ಸಾವುಗಳ ಸಂಖ್ಯೆ (1995–2023) **96**



ಸರಕಾರೇತರೇ ಸಂಸ್ಥೆಗಳು ಸಂಗ್ರಹಿಸಿದ ಅಂಕಿಅಂಶಗಳ ಪ್ರಕಾರ, ಕರ್ನಾಟಕದಲ್ಲಿ 1995–2023ರ ನಡುವೆ 106 ಮಾನ್ಯುಯಲ್ ಸ್ಕ್ಯಾವೆಂಜಿಂಗ್ ಪ್ರಕರಣಗಳಲ್ಲಿ 96 ಜನರು ಸಾವನ್ನಪ್ಪಿದ್ದಾರೆ, ಅವರಲ್ಲಿ ಹೆಚ್ಚಿನವರು ಪರಿಶಿಷ್ಟ ಜಾತಿಗೆ ಸೇರಿದವರು..



**92%** ನಗರದ ಒಳಚರಂಡಿ, ಸೆಪ್ಟಿಕ್ ಟ್ಯಾಂಕ್ ಅನ್ನು ಸ್ವಚ್ಛಗೊಳಿಸುವವರು, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ಗುಂಪುಗಳಿಗೆ ಸೇರಿದ ಕಾರ್ಮಿಕರಾಗಿದ್ದಾರೆ (ದ ಹಿಂದೂ ಪತ್ರಿಕೆ ವರದಿ 29 ಸೆಪ್ಟಂಬರ್ 2024)

| CASTE/ CATEGORY | NO. OF SSWs | % AGE |
|---|---|---|
| GENERAL | 4,391 | 8.05 |
| OBC | 8,587 | 15.73 |
| SC | 37,060 | 67.91 |
| ST | 4,536 | 8.31 |
| TOTAL | 54,574 | |

## ಕರ್ನಾಟಕದಲ್ಲಿ ಮ್ಯಾನ್ಯುವಲ್ ಸ್ಕ್ಯಾವೆಂಜಿಂಗ್ ಕೆಲಸವನ್ನು ಯಾರು ಮಾಡುತ್ತಾರೆ?

ರಾಷ್ಟ್ರೀಯ ಕಾನೂನು ಶಾಲೆ, ಬೆಂಗಳೂರಿನ ಸಮೀಕ್ಷೆಯ ಪ್ರಕಾರ, ಕರ್ನಾಟಕದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜರ್‌ಗಳಾಗಿ ಕೆಲಸ ಮಾಡುವವರಲ್ಲಿ 92.33% ಪರಿಶಿಷ್ಟ ಜಾತಿಗೆ ಸೇರಿದವರು ಮತ್ತು 3.3% ಪರಿಶಿಷ್ಟ ಪಂಗಡಗಳಿಂದ ಬಂದವರು. 74% ಕ್ಕಿಂತ ಹೆಚ್ಚು ಮಾದಿಗ ಸಮುದಾಯದಿಂದ ಬಂದವರು.

**data by Ministry of social justice and empowerment 2024. SSW- Sewer and Septic Tank Workers*

## ಕರ್ನಾಟಕದಲ್ಲಿ ಮ್ಯಾನುಯಲ್ ಸ್ಕ್ಯಾವೆಂಜಿಂಗ್ ನಿಷೇಧ ಕಾಯ್ದೆ ಪರಿಣಾಮಕಾರಿಯಾಗಿ ಜಾರಿಯಾಗುತ್ತಿದೆಯೇ?

ಕರ್ನಾಟಕದಲ್ಲಿ ಈ ಕಾಯಿದೆಯಡಿ ದಾಖಲಾಗಿರುವ ಪ್ರಕರಣಗಳಲ್ಲಿ, ಶಿಕ್ಷೆಯ ಪ್ರಮಾಣ ತೀರಾ ಕಡಿಮೆ. 2013 ರಿಂದ 2023ರ ಡಿಸೆಂಬರ್‌ವರೆಗೆ, ದಾಖಲಾದ 87 ಪ್ರಕರಣಗಳ ಪೈಕಿ 21 ಪ್ರಕರಣಗಳಲ್ಲಿ ಪೊಲೀಸ್ ಇಲಾಖೆಯಿಂದ ಮುಚ್ಚಲಾಗಿದೆ (ಬಿ ವರದಿ), 21 ಪ್ರಕರಣಗಳಲ್ಲಿ ಆರೋಪಿಗಳನ್ನು ಖುಲಾಸೆಗೊಳಿಸಲಾಗಿದೆಮತ್ತು ಕೇವಲ 6 ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ! (ಉಳಿದ ಪ್ರಕರಣಗಳು ತನಿಖೆ ಅಥವಾ ವಿಚಾರಣೆ ಹಂತದಲ್ಲಿವೆ.)

| ದಾಖಲಾದ ಪ್ರಕರಣಗಳ ಸಂಖ್ಯೆ (2013-23) | ಪೊಲೀಸರು ಮುಚ್ಚಿದ ಪ್ರಕರಣಗಳ ಸಂಖ್ಯೆ (ಬಿ ವರದಿ) | ಆರೋಪಿಗಳು ಖುಲಾಸೆಯಾದ ಪ್ರಕರಣಗಳು | ಆರೋಪಿಗಳಿಗೆ ಶಿಕ್ಷೆಯಾದ ಪ್ರಕರಣಗಳು |
|---|---|---|---|
| 87 | 21 | 21 | 6 |